This Booklet contains **20** printed pages.
इस पुस्तिका में **20** मुद्रित पृष्ठ हैं।

# AK14II

**Test Booklet No.**
**परीक्षा पुस्तिका संख्या**

## PAPER—II / प्रश्न-पत्र—II

## KANNADA LANGUAGE SUPPLEMENT / कन्नड़ भाषा परिशिष्ट

## PART—IV & V / भाग—IV & V

**Test Booklet Code**
**परीक्षा पुस्तिका संकेत**

**M**

Do not open this Test Booklet until you are asked to do so.
इस परीक्षा पुस्तिका को तब तक न खोलें जब तक कहा न जाए।
Read carefully the Instructions on the Back Cover (Pages 19 & 20) of this Test Booklet.
इस परीक्षा पुस्तिका के पिछले आवरण (पृष्ठ 19 व 20) पर दिए गए निर्देशों को ध्यान से पढ़ें।
**For Instructions in Kannada see Page 2 of this Booklet.**
**कन्नड़ में निर्देशों के लिए इस पुस्तिका का पृष्ठ 2 देखें।**

### *Instructions for Candidates :*

1. This booklet is a supplement to the Main Test Booklet for those candidates who wish to answer **EITHER** Part—IV (Language—I) **OR** Part—V (Language—II) in **KANNADA** language, but **NOT BOTH**.
2. Candidates are required to answer Part—I, and Part—II OR III from the Main Test Booklet and Parts—IV and V from the languages chosen by them.
3. Questions on English and Hindi languages for Part—IV and Part—V have been given in the Main Test Booklet. Language Supplements can be asked for separately.
4. Use **Blue/Black Ballpoint Pen only** for writing particulars on this page/marking responses in the Answer Sheet.
5. The CODE for this Language Booklet is **M**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **Two** Parts—IV and V, consisting of **60** Objective-type Questions and each carrying 1 mark :

   Part-IV : Language-I (Kannada) (Q. Nos. 91-120)
   Part-V : Language-II (Kannada) (Q. Nos. 121-150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada Language have been given. **In case the language(s) you have opted for as Language-I and/or Language-II is a language other than Kannada, please ask for a Test Booklet that contains questions on that Language. The languages being answered must tally with the languages opted for in your Application Form.**
8. **Candidates are required to attempt questions in Part-V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

### परीक्षार्थियों के लिए निर्देश :

1. यह पुस्तिका मुख्य परीक्षा पुस्तिका की एक परिशिष्ट है उन परीक्षार्थियों के लिए जो या तो भाग—IV (भाषा—I) **या** भाग—V (भाषा—II) का उत्तर **कन्नड़** भाषा में देना चाहते हैं, लेकिन **दोनों नहीं**।
2. परीक्षार्थी भाग—I, एवं भाग—II या III के उत्तर मुख्य परीक्षा पुस्तिका से दें और भाग—IV व V के उत्तर उनके द्वारा चुनी भाषाओं से।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग—IV व भाग—V के अन्तर्गत दिए गए हैं। भाषा परिशिष्टों को आप अलग से माँग सकते हैं।
4. इस पृष्ठ पर विवरण अंकित करने एवं उत्तर-पत्र पर निशान लगाने के लिए केवल **नीले/काले बॉलपॉइंट पेन** का प्रयोग करें।
5. इस भाषा पुस्तिका का **संकेत M** है। यह सुनिश्चित कर लें कि इस भाषा परिशिष्ट पुस्तिका का संकेत, उत्तर-पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है। अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ।
6. इस परीक्षा पुस्तिका में दो भाग—IV और V हैं, जिनमें **60** वस्तुनिष्ठ प्रश्न हैं तथा प्रत्येक 1 अंक का है :

   भाग—IV : भाषा—I (कन्नड़) (प्रश्न सं० 91-120)
   भाग—V : भाषा—II (कन्नड़) (प्रश्न सं० 121-150)
7. भाग—IV में भाषा—I के लिए 30 प्रश्न और भाग—V में भाषा—II के लिए 30 प्रश्न दिए गए हैं। इस परीक्षा पुस्तिका में केवल कन्नड़ भाषा से सम्बन्धित प्रश्न दिए गए हैं। **यदि भाषा—I और/या भाषा—II में आपके द्वारा चुनी गई भाषा(एँ) कन्नड़ के अलावा है/हैं, तो कृपया उस भाषा वाली परीक्षा पुस्तिका माँग लें। जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए।**
8. **परीक्षार्थी भाग—V (भाषा—II) के लिए, भाषा सूची से ऐसी भाषा चुनें जो उनके द्वारा भाषा—I (भाग—IV) में चुनी गई भाषा से भिन्न हो।**
9. रफ़ कार्य परीक्षा पुस्तिका में इस प्रयोजन के लिए दी गई खाली जगह पर ही करें।
10. सभी उत्तर केवल OMR उत्तर-पत्र पर ही अंकित करें। अपने उत्तर ध्यानपूर्वक अंकित करें। उत्तर बदलने हेतु श्वेत रंजक का प्रयोग निषिद्ध है।

Name of the Candidate (in Capitals) : ______________________
परीक्षार्थी का नाम (बड़े अक्षरों में)

Roll Number (in figures) : ______________________
अनुक्रमांक (अंकों में)

(in words) : ______________________
(शब्दों में)

Centre of Examination (in Capitals) : ______________________
परीक्षा-केन्द्र (बड़े अक्षरों में)

Candidate's Signature : ______________________
परीक्षार्थी के हस्ताक्षर

Invigilator's Signature : ______________________
निरीक्षक के हस्ताक्षर

Facsimile signature stamp of Centre Superintendent ______________________

**07-II**

ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.

# AK14II

ಪ್ರಶ್ನೆ ಪುಸ್ತಿಕೆ ಸಂಕೇತ

**M**

## ಪ್ರಶ್ನೆ ಪತ್ರಿಕೆ—II

## ಕನ್ನಡ ಭಾಷಾ ಪೂರಕ

## ಭಾಗ—IV & V

ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.

ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 and 20) ಗಮನವಿಟ್ಟು ಓದಿರಿ.

*ಪರೀಕ್ಷಾರ್ಥಿಗಳಿಗೆ ಸೂಚನೆಗಳು :*

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) ಅಥವಾ ಭಾಗ V (ಭಾಷೆ II)ನ್ನು ಕನ್ನಡ ಭಾಷೆಯಲ್ಲಿ ಉತ್ತರಿಸಲು ಆಯುದ್ದೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು, ಎರಡನ್ನೂ ಅಲ್ಲ.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I ಮತ್ತು ಭಾಗ II ಅಥವಾ III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು Vರ ಉತ್ತರವನ್ನು ತಾವು ಆಯುದ್ದೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು Vರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು ಕೇವಲ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ ಸಂಕೇತ **M** ಆಗಿದೆ. ಉತ್ತರ ಪತ್ರಿಕೆಯ ಪುಟ-2ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ಭಾಗಗಳಿವೆ **IV** ಮತ್ತು **V**. ಇದರಲ್ಲಿ 60 ವಸ್ತುನಿಷ್ಠ ಪ್ರಶ್ನೆಗಳಿವೆ. ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ :

   ಭಾಗ **IV** : ಭಾಷಾ **I** – (ಕನ್ನಡ) (ಪ್ರಶ್ನೆ **91** ರಿಂದ **120**)

   ಭಾಗ **V** : ಭಾಷಾ **II** – (ಕನ್ನಡ) (ಪ್ರಶ್ನೆ **121** ರಿಂದ **150**)
7. ಭಾಗ IVರಲ್ಲಿ ಭಾಷೆ Iಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ Vರಲ್ಲಿ ಭಾಷೆ IIಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. ಒಂದು ವೇಳೆ ಭಾಷೆ I ಮತ್ತು/ಅಥವಾ IIರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು - ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.
8. ಪರೀಕ್ಷಾರ್ಥಿ ಭಾಗ **V** (ಭಾಷೆ **II**)ಕ್ಕಾಗಿ, ಭಾಷೆ **I** (ಭಾಗ **IV**)ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ **(OMR)** ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ **(Whitener)** ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) : ______________________

ಕ್ರಮ ಸಂಖ್ಯೆ (ಅಂಕೆಗಳಲ್ಲಿ) : ______________________

(ಅಕ್ಷರಗಳಲ್ಲಿ) : ______________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ): ______________________

ಪರೀಕ್ಷಾರ್ಥಿಯ ಸಹಿ : ______________ ನಿರೀಕ್ಷಕರ ಸಹಿ : ______________

Facsimile signature stamp of Centre Superintendent ______________________

ಅಭ್ಯರ್ಥಿಗಳು ಕನ್ನಡವನ್ನು ಭಾಷೆ—I ನ್ನಾಗಿ ಆಯ್ಕೆ ಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

→

## ಭಾಗ—IV : ಭಾಷೆ—I

## ಕನ್ನಡ

*ಸೂಚನೆ:* ಕೆಳಗೆ ಕೊಟ್ಟಿರುವ ಗದ್ಯವನ್ನು ಓದಿ ಕೇಳಿರುವ ಪ್ರಶ್ನೆಗಳಿಗೆ **(91 ರಿಂದ 99)** ಸೂಕ್ತವಾದ ಆಯ್ಕೆಯನ್ನು ಆರಿಸಿ ಉತ್ತರಿಸಿ:

ಇದು ಹರಿದ್ವಾರ. ಒಂದೆಡೆ ದೀರ್ಘವಾಗಿ ಹಬ್ಬಿಕೊಂಡಿರುವ ಬೂದುಬಣ್ಣದ ಶಿವಾಲಿಕ ಬೆಟ್ಟಗಳು, ಇನ್ನೊಂದೆಡೆ ವಿಸ್ತಾರವಾಗಿ, ವೇಗವಾಗಿ ಪ್ರವಹಿಸುವ ಗಂಗಾನದಿ. ಈ ಎರಡರ ನಡುವೆ ಉದ್ದಕ್ಕೂ ಚಾಚಿಕೊಂಡಿದೆ ಹರಿದ್ವಾರವೆಂಬ ಈ ಊರು. ಸಮುದ್ರ ಮಟ್ಟದಿಂದ ಕೇವಲ 945 ಅಡಿಗಳ ಎತ್ತರದಲ್ಲಿರುವ ಈ ಊರು, ಚಳಿಗಾಲದಲ್ಲಿ ಕೊರೆಯುವ ಚಳಿಗೆ, ಬೇಸಗೆಯಲ್ಲಿ ಉರಿಯುವ ಬಿಸಿಲಿಗೆ ಮೈ ಒಡ್ಡಿಕೊಂಡಿದೆ. ನಾವು ಈ ಊರಿಗೆ ಬಂದದ್ದು ನಟ್ಟನಡೂ ಬೇಸಗೆಯಲ್ಲಿ, ಮೇ ತಿಂಗಳ ಎರಡನೆಯ ವಾರದಲ್ಲಿ. ಹಿಮಾಲಯಕ್ಕೆ ಪ್ರವಾಸ ಹೋಗುವವರಿಗೆ ಮೇ ಅಥವಾ ಸೆಪ್ಟೆಂಬರ್ ತಿಂಗಳುಗಳು ಸರಿಯಾದ ಕಾಲ. ಬದರೀ ಕೇದಾರಗಳ ದೇವಸ್ಥಾನಗಳ ಬಾಗಿಲು, ದರ್ಶನಾರ್ಥಿಗಳಿಗೆ ತೆರೆಯಿತೆಂಬ ಪ್ರಕಟಣೆ ಹೊರಟ ಕೂಡಲೇ ಇಂಡಿಯಾದ ವಿವಿಧಾ ಭಾಗಗಳಿಂದ ಯಾತ್ರಾರ್ಥಿಗಳು ಉತ್ತರ ಖಂಡದ ತೀರ್ಥಯಾತ್ರೆಗೆ ಧಾವಿಸಿ ಬರುತ್ತಾರೆ. ಕೆಲವರಂತೂ ಆಯಾ ದೇಗುಲಗಳ ಬಾಗಿಲು ತೆರೆದ ಕೂಡಲೇ ಪ್ರವೇಶಿಸುವ ಮೊದಲಿಗರಾಗಿ ಕಾದಿರುತ್ತಾರೆ. ಈ ಬದರಿ ಕೇದಾರಗಳಿಗೆ ಹೊರಡುವ ಯಾತ್ರಿಕರು ಮೊದಲು ಬರಬೇಕಾದದ್ದು ಹರಿದ್ವಾರಕ್ಕೆ.

ಮೇ ತಿಂಗಳು (1984) ಹದಿಮೂರನೇ ದಿನಾಂಕ, ಇಳಿ ಮಧ್ಯಾಹ್ನದ ಸುಡುಬಿಸಿಲಿನಲ್ಲಿ ನಾವು ಸೈಕಲ್ ರಿಕ್ಷಾ ಮಾಡಿಕೊಂಡು ಹರಿದ್ವಾರದ ಬೀದಿಗಳಲ್ಲಿ ಹೊರಟಿದ್ದೆವು. ಸಂಜೆಯ ಒಳಗಾಗಿ ಸಾಧ್ಯವಾದಷ್ಟು ಸ್ಥಳಗಳನ್ನು ನೋಡಿಕೊಂಡು, ಗಂಗಾನದಿಯ ಬ್ರಹ್ಮಕುಂಡದಲ್ಲಿ ನಡೆಯುವ ಆರತಿಯನ್ನು ನೋಡಬೇಕೆಂಬುದು ನಮ್ಮ ಗುರಿಯಾಗಿತ್ತು. ದಕ್ಷ ಮಹಾದೇವ ಮಂದಿರ, ಬಿಲ್ವಕೇಶ್ವರ ಮಹಾದೇವ, ಗೀತಾಭವನ, ಗೋರಖನಾಥ ಮಂದಿರ ಇತ್ಯಾದಿಗಳ ಕಡೆಗೆ ಸುಮ್ಮನೆ ಕಣ್ಣು ಹಾಯಿಸಿ ಮುಂದುವರಿದೆವು. ಅವುಗಳಿಗೆ ಕೇವಲ ಸ್ಥಳ ಮಹಾತ್ಮೆಯ ಕಾರಣದಿಂದಲ್ಲದೆ ಬೇರೆ ಯಾವ ರೀತಿಯ ವಿಶೇಷತೆಯೂ ಇದ್ದಂತೆ ತೋರಲಿಲ್ಲ. ದಕ್ಷ ಮಹಾದೇವ ಮಂದಿರದ ಹತ್ತಿರ ಸತೀ ಕುಂಡವಿದೆ. ದಾಕ್ಷಾಯಿಣಿ, ತನ್ನ ತಂದೆ ದಕ್ಷ ಬ್ರಹ್ಮನ ಯಾಗಕ್ಕೆ ಬಂದು, ಅಲ್ಲಿ ತನ್ನ ಪತಿಯಾದ ಶಿವನ ನಿಂದೆಯನ್ನು ಕೇಳಲಾರದೆ ಅಗ್ನಿ ಕುಂಡದಲ್ಲಿ ಧುಮುಕಿ ದಗ್ಧಳಾದ ಸ್ಥಳ ಇದು ಎಂದು ಹೇಳಲಾಗಿದೆ.

ಹರಿದ್ವಾರ ಎಲ್ಲ ತೀರ್ಥಕ್ಷೇತ್ರ ನಗರಗಳಂತೆ, ತನ್ನೊಳಗೆ ಪ್ರಾಚೀನತೆಯ ಲಕ್ಷಣಗಳನ್ನು ಉಳಿಸಿಕೊಂಡಿದೆ. ಎರಡೂ ಬದಿಗೆ ಎತ್ತರದ ಮನೆಗಳನ್ನು ಹಬ್ಬಿಸಿಕೊಂಡ ಇಕ್ಕಟ್ಟಾದ ಬೀದಿಗಳ ಸಾಲು, ನಡು ನಡುವೆ ತಟ್ಟನೆ ಕಣ್ಣನ್ನು ಸೆಳೆಯುವ ಗುಡಿಗಳು, ಆಶ್ರಮಗಳು, ಧರ್ಮಶಾಲೆಗಳು ಇತ್ಯಾದಿಗಳಿಂದ ಮತ್ತು ಎಲ್ಲಾ ತೀರ್ಥಕ್ಷೇತ್ರಗಳಿಗೂ ಸಮಾನ ಅಂಶವಾದ ಗಲೀಜುಗಳಿಂದ ತನ್ನ ಪ್ರತ್ಯೇಕತೆಯನ್ನು ಕಾಯ್ದುಕೊಂಡಿದೆ. ಹರಿದ್ವಾರ ಭಾರತದ ಏಳು ಪ್ರಾಚೀನ ಪವಿತ್ರ ನಗರಗಳಲ್ಲಿ ಒಂದು. ಅಯೋಧ್ಯೆ, ಮಥುರಾ, ಕಾಶೀ, ಮಾಯಾ, ಕಾಂಚೀ, ಅವಂತೀ, ದ್ವಾರಾವತೀ - ಇವೇ ಪುರಾಣೋಕ್ತವಾದ ಪ್ರಾಚೀನ ನಗರಗಳು. ಈ ಪಟ್ಟಿಯಲ್ಲಿರುವ 'ಮಾಯಾ' ಎಂಬುದೇ ಹರಿದ್ವಾರ. ಇದನ್ನು ಮಾಯಾ, ಮಾಯಾಪುರಿ, ಮಾಯಾವತಿ ಎಂದೂ ಉಲ್ಲೇಖಿಸಲಾಗಿದೆ. ಚೀನಾ ದೇಶದ ಬೌದ್ಧ ಯಾತ್ರಿಕನಾದ ಹ್ಯೂಯೆನ್‌ತ್ಸಾಂಗನು ಇದನ್ನು ಮೊಯುಲೊ (Moyulo) ಅಥವಾ ಮಯೂರ ಎಂದು ಕರೆದಿದ್ದಾನೆ. ಈ ಹೆಸರಿಗೂ ಹಿಂದಿನ ಹೆಸರೊಂದು ಹರಿದ್ವಾರಕ್ಕೆ ಇತ್ತು. ಅದೇ ಕಪಿಲಸ್ಥಾನ. ಸಗರ ಪುತ್ರರನ್ನು ಕಪಿಲ ಮಹರ್ಷಿಯು ತನ್ನ ಕೋಪಾಗ್ನಿಯಿಂದ ಬೂದಿ ಮಾಡಿದ

ನಂತರ ಸಗರ ವಂಶದ ಭಗೀರಥನು ತನ್ನ ಪಿತೃಗಳಿಗೆ ಸದ್ಗತಿಯನ್ನು ಕಾಣಿಸಲು ಗಂಗೆಯನ್ನು ತಂದು ಹರಿಸಿದ ಸ್ಥಳವಂತೆ ಇದು.

91. ಹರಿದ್ವಾರದಲ್ಲಿ ಹರಿಯುವ ನದಿ

(1) ಗಂಗಾ

(2) ಕಾವೇರಿ

(3) ಗೋದಾವರಿ

(4) ನರ್ಮದಾ

92. ಹರಿದ್ವಾರದ ಹಿಂದಿನ ಹೆಸರು

(1) ಶಿವಸ್ಥಾನ

(2) ಹರದ್ವಾರ

(3) ಕಪಿಲ ಸ್ಥಾನ

(4) ಬದರಿದ್ವಾರ

93. ಲೇಖಕರ ಗುರಿ ಗಂಗಾನದಿಯ ಬ್ರಹ್ಮಕುಂಡದಲ್ಲಿ ನಡೆಯುವ ................. ನೋಡಬೇಕೆಂಬುದಾಗಿತ್ತು.

(1) ಯಾಗ

(2) ದರ್ಶನ

(3) ಕೋಪಾಗ್ನಿ

(4) ಆರತಿ

94. ಹರಿದ್ವಾರ ಸಮುದ್ರ ಮಟ್ಟದಿಂದ ............. ಅಡಿಗಳ ಎತ್ತರದಲ್ಲಿದೆ.

(1) 645

(2) 835

(3) 945

(4) 954

95. ಸತಿ ಕುಂಡವಿರುವ ಸ್ಥಳದ ಹೆಸರು

(1) ಗೀತಾಭವನ

(2) ದಕ್ಷ ಮಹಾದೇವ ಮಂದಿರ

(3) ದಕ್ಷಬ್ರಹ್ಮ ಮಂದಿರ

(4) ದಾಕ್ಷಾಯಿಣಿ ಮಂದಿರ

96. ಇವುಗಳಲ್ಲಿ ಯಾವುದು ಭಾರತದ ಏಳು ಪ್ರಾಚೀನ ಪವಿತ್ರ ಸ್ಥಳಗಳಲ್ಲಿ ಒಂದಲ್ಲ?

(1) ಕಾಚಿ

(2) ಕಾಶೀ

(3) ಕಾಂಚೀ

(4) ಅವಂತೀ

97. ಹರಿದ್ವಾರಕ್ಕೆ ಚೀನಾದ ಬೌದ್ಧ ಯಾತ್ರಿಕ ಹ್ಯೂಯೆನ್‌ತ್ಸಾಂಗ್‌ನು ಕರೆದ ಹೆಸರು

(1) ಮಾಯ

(2) ಮಾಯಪುರಿ

(3) ಮೊಯುಲೊ

(4) ಮಾಯಾವತಿ

98. ದಕ್ಷಬ್ರಹ್ಮನ ಮಗಳ ಹೆಸರು

(1) ದಾಕ್ಷಾಯಿಣಿ

(2) ಅವಂತೀ

(3) ದ್ವಾರಾವತೀ

(4) ಭಗೀರಥಿ

99. ಹಿಮಾಲಯಕ್ಕೆ ಪ್ರವಾಸ ಹೋಗುವವರಿಗೆ ಯಾವ ತಿಂಗಳುಗಳು ಸೂಕ್ತ?

(1) ಆಗಸ್ಟ್ ಅಥವಾ ಡಿಸೆಂಬರ್

(2) ಜೂನ್ ಅಥವಾ ಅಕ್ಟೋಬರ್

(3) ಮೇ ಅಥವಾ ಸೆಪ್ಟೆಂಬರ್

(4) ಮಾರ್ಚ್ ಅಥವಾ ಆಗಸ್ಟ್

ಸೂಚನೆ: ಕೆಳಗೆ ಕೊಟ್ಟಿರುವ ಪದ್ಯವನ್ನು ಓದಿ ಕೇಳಿರುವ ಪ್ರಶ್ನೆಗಳಿಗೆ **(100 ರಿಂದ 105)** ಸೂಕ್ತವಾದ ಆಯ್ಕೆಯನ್ನು ಆರಿಸಿ ಉತ್ತರಿಸಿ :

ಶುಭವಾಗಲಿ ಶುಭವಾಗಲಿ ಶುಭವಾಗಲಿ ನಾಡಿಗೆ
ಹಗೆ ಹರಡದೆ ಬಗೆ ಕದಡದೆ ಬಲಿಯಾಗದೆ ಸೇಡಿಗೆ
ಶಾಂತಿ ಸಹನೆ ಬದುಕುಳಿಯಲಿ ಕ್ರಾಂತಿಯೇಕೆ ಬಾಳಿಗೆ
ಮನುಜಮತದ ಪಥದೆ ನಡೆಯೆ ಬಾಳು ಹಿರಿದು ನಾಳೆಗೆ
ದ್ವೇಷ ತೊರೆದು ಸ್ನೇಹ ಮೆರೆದು ನಲಿಯಲಿ ಯುವ ಪೀಳಿಗೆ
ಬೆವರ ಸುರಿಸಿ ದುಡಿದು ಕೈಯ ಚಾಚದಿರಲಿ ಕೂಳಿಗೆ ॥
ದಹಿಸದಿರಲಿ ಪ್ರೀತಿ ಪೈರು ಅನ್ಯಾಯದ ಕಾವಿಗೆ;
ಬೆಳೆದು ಬರಲಿ ಕರುಣೆ ಮಾವು ಎಡೆಗೊಡದೆ ಬೇವಿಕೆ;
ತಾಯ ಮಡಿಲು ಒಂದೆ ತಾನೆ ನಾಡಿನೆಲ್ಲ ಜೀವಿಗೆ;
ಭೇದಭಾವವೇಕೆ? ಬೇಕು ಹೊರಡೆತಾಯ ಸೇವೆಗೆ;
ಹಾದಿಗೆಲ್ಲ ಚೆಲ್ಲಿ ಹೂವ ಪ್ರಗತಿಯ ನವ ಚೈತ್ರಗೆ;
ಮನಮನಗಳ ನಡುವೆ ಬೆಸುಗೆ ಮೂಡಲಿ ಹೊಸ ಮೈತ್ರಿಗೆ;
ಒಂದಾಗಿರಿ ಮುಂದಾಗಿರಿ ಹರುಷವೀಯೆ ಧಾತ್ರಿಗೆ;
ಯುಗಯುಗಗಳು ಸಾವಿರಿರಲಿ ನಾಡ ವಿಜಯಯಾತ್ರೆಗೆ;

**100.** ತಾಯಿ ಮಡಿಲು ಒಂದೇ ತಾನೆ ........... ಜೀವಿಗೆ

(1) ದೇಶದೆಲ್ಲ

(2) ವಿಶ್ವದೆಲ್ಲ

(3) ನಾಡಿನೆಲ್ಲ

(4) ಊರಿನೆಲ್ಲ

**101.** ಕವಿತೆಯಲ್ಲಿ ಬರುವ 'ಧಾತ್ರಿ' ಪದದ ಅರ್ಥ

(1) ಹಾದಿ

(2) ಪ್ರಯಣ

(3) ಭೂಮಿ

(4) ಸ್ನೇಹ

**102.** ಈ ಕವನ ಮನ ಮನಗಳ ನಡುವೆ ಏನು ಮೂಡಲಿ ಎನ್ನುತ್ತದೆ?

(1) ಸಲಿಗೆ

(2) ಶಾಂತಿ

(3) ಸ್ನೇಹ

(4) ಬೆಸುಗೆ

**103.** ಈ ಕವನ, ಯುವಕರು ಯಾವುದಕ್ಕೆ ಮುಂದಾಗಿರಬೇಕೆಂದು ಹೇಳುತ್ತದೆ?

(1) ಪ್ರಗತಿಗೆ

(2) ಕೋಪಕ್ಕೆ

(3) ನ್ಯಾಯಕ್ಕೆ

(4) ಸೇಡಿಗೆ

**104.** ಬೆವರು ಸುರಿಸಿ ದುಡಿದು ಯಾವುದಕ್ಕೆ ಕೈಚಾಚಬಾರದು?

(1) ಬಾಳಿಗೆ

(2) ಬದುಕಿಗೆ

(3) ನಾಳೆಗೆ

(4) ಕೂಳಿಗೆ

**105.** ಯುವ ಪೀಳಿಗೆ ಯಾವುದನ್ನು ತೊರೆದು ನಲಿಯಬೇಕು?

(1) ದ್ವೇಷ

(2) ಸ್ನೇಹ

(3) ಸಹನೆ

(4) ಕ್ರಾಂತಿ

ಸೂಚನೆ : ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದುದನ್ನು ಆರಿಸಿ ಉತ್ತರಿಸಿ **(106 ರಿಂದ 120)** :

**106.** ಭಾಷೆ ಕಲಿಯುವವರು '<u>ಅರ್ಥದ ಅನುಸಂಧಾನ</u>'ದ ಮೂಲಕ ಸಂವಹನ ಕೌಶಲವನ್ನು ಬೆಳೆಸಿಕೊಳ್ಳುತ್ತಾರೆ ಎಂದರೆ

(1) ಆಗಿಂದಾಗ್ಗೆ ಶಬ್ದಕೋಶವನ್ನು ಬಳಸಿ ಸರಿಯಾದ ಅರ್ಥವನ್ನು ಕಲಿತು ಬಳಸುವುದು ಎಂದರ್ಥ.

(2) ಹೆಚ್ಚಿನ ಸ್ಪಷ್ಟೀಕರಣದೊಂದಿಗೆ ಮಾಹಿತಿಯನ್ನು ಹಂಚಿಕೊಂಡು ಮಾಹಿತಿಯನ್ನು ಪುನರ್‌ರಚಿಸಿ ಅರ್ಥ ಮಾಡಿಕೊಳ್ಳುವುದು ಎಂದರ್ಥ.

(3) ವ್ಯಾಕರಣ ರಚನೆಗಳನ್ನು ಬಳಸುವುದು ಎಂದರ್ಥ.

(4) ಆ ಪತ್ರಿಕೆಗೆ ಅಥವಾ ಪಠ್ಯಕ್ಕೆ ಸಂಬಂಧಿಸಿದ ಬೋಧಕರೊಡನೆ ಚರ್ಚಿಸಿ ತಮ್ಮ ಅನುಮಾನಗಳನ್ನು ಬಗೆಹರಿಸಿಕೊಳ್ಳುವುದು ಎಂದರ್ಥ.

**107.** ಈ ಕೆಳಗೆ ಕೊಟ್ಟಿರುವ ಭಾಷಾ ಕೌಶಲ್ಯಗಳನ್ನು ಸುಲಭವಾಗಿ ಈ ಕ್ರಮದಲ್ಲಿ ಗಳಿಸಿಕೊಳ್ಳಬಹುದು

(1) ಕೇಳಿಸಿಕೊಳ್ಳುವುದು, ಮಾತನಾಡುವುದು, ಬರೆಯುವುದು, ಓದುವುದು.

(2) ಕೇಳಿಸಿಕೊಳ್ಳುವುದು, ಮಾತನಾಡುವುದು, ಓದುವುದು, ಬರೆಯುವುದು.

(3) ಕೇಳಿಸಿಕೊಳ್ಳುವುದು, ಓದುವುದು, ಮಾತನಾಡುವುದು, ಬರೆಯುವುದು.

(4) ಮಾತನಾಡುವುದು, ಕೇಳಿಸಿಕೊಳ್ಳುವುದು, ಓದುವುದು, ಬರೆಯುವುದು.

**108.** ಭಾಷಾ ಕಲಿಕೆ ಯಾವಾಗ ಸಾರ್ಥಕವಾಗುತ್ತದೆಂದರೆ ಅವರ ಕಲಿಕೆ

(1) ಮಾತೃಭಾಷೆಯ ರೂಪ ಮತ್ತು ಶಬ್ದಗಳಿಗೆ ಹತ್ತಿರ ಇದ್ದಾಗ

(2) ಕಾಲೇಜು ಶಿಕ್ಷಣದ ಪ್ರವೇಶಾತಿಯಲ್ಲಿ ಸಹಾಯಕವಾದಾಗ

(3) ತಮ್ಮ ಜೀವನದ ಮೌಲ್ಯ ಹಾಗೂ ಗುರಿಗಳಲ್ಲಿ ಕ್ರಿಯಾತ್ಮಕವಾಗಿ ತೊಡಗಿಕೊಂಡಾಗ

(4) ನಿಯಂತ್ರಿತ ತರಗತಿಯ ವಾತಾವರಣದಲ್ಲಿ ಕಲಿತಾಗ

**109.** ಭಾಷಾ ಕಲಿಕಾ ಚಟುವಟಿಕೆಯಲ್ಲಿ ಕೊಟ್ಟಿರುವ ಪಟ್ಟಿಯಲ್ಲಿನ ಶೀರ್ಷಿಕೆಗಳನ್ನು ನೋಡಿಕೊಂಡು ಕಲಿಯುವವರು ಧ್ವನಿ ಸುರುಳಿಯೊಂದನ್ನು ಹಾಕುವ ಮುಂಚೆ ಬರುವ ತಲೆಬರಹವನ್ನು ಗಮನಿಸಿ ಆರಿಸಬೇಕು. ಈ ಚಟುವಟಿಕೆಯು

(1) ವಿಷಯಗಳನ್ನು ಗಮನಿಸುತ್ತಾರೆ.

(2) ಉತ್ತರವನ್ನು ಊಹಿಸುತ್ತಾರೆ.

(3) ಕೈಬಿಟ್ಟಿರುವ ಮಾಹಿತಿಯನ್ನು ತುಂಬುತ್ತಾರೆ.

(4) ಧ್ವನಿ ಸುರುಳಿಯ ಮಾಹಿತಿಯನ್ನು ಕುರಿತ ಭವಿಷ್ಯ ಕಥನ.

**110.** ಮಾತಾಡುವುದಕ್ಕೋಸ್ಕರ ಮಾತಾಡುವುದು ವಿದ್ಯಾರ್ಥಿಗಳಿಗೆ ಬಹು ಸಂತೋಷದ ಕೆಲಸ. ಈ ಚಟುವಟಿಕೆಯನ್ನು ಹೆಚ್ಚು ಅರ್ಥವತ್ತಾಗಿಸಲು

(1) ಸ್ಪಷ್ಟ ಉಚ್ಚಾರಣೆ ಮತ್ತು ರಚನೆಯನ್ನು ಬಳಸುವಂತೆ ಒತ್ತು ಕೊಡಬೇಕು.

(2) ಬರವಣಿಗೆ ಅಥವಾ ಓದುವ ಚಟುವಟಿಕೆಗಳನ್ನು ನೀಡುವುದರ ಮೂಲಕ ಅದನ್ನು ಅಡ್ಡಿಪಡಿಸಬೇಕು.

(3) ಕೈಕೊಂಡ ಕೆಲಸವನ್ನು ಕೊನೆಯಲ್ಲಿ ಮುಗಿಸುವಂತೆ ಪ್ರೇರೇಪಿಸಬೇಕು.

(4) ನಿಗಧಿಪಡಿಸಿದ ಶಬ್ದಕೋಶದ ಪಟ್ಟಿಯನ್ನು ಒದಗಿಸಬೇಕು.

**111.** ಪರಿಣಾಮಕಾರಿ ಮಾನವ ಸಂವಹನ (ಮಾತನಾಡುವ/ಬರವಣಿಗೆ) ಮತ್ತು ಮಾನವನ ವಿಚಾರಗಳ ಮಧ್ಯೆ ಇರುವ ಮುಖ್ಯ/ಮೂಲ *ಸಂಬಂಧ*

(1) ದೊಡ್ಡ ಅಕ್ಷರದಿಂದ ಪ್ರಾರಂಭ ಮತ್ತು ವಿರಾಮ ಚಿಹ್ನೆ

(2) ರಾಗ ಮತ್ತು ಒತ್ತು

(3) ವ್ಯಾಕರಣಾತ್ಮಕ ರಚನೆಗಳು

(4) ಉಚ್ಚಾರಣೆ/ಘಾತ

112. ಉಪಾಧ್ಯಾಯರು ದೃಶ್ಯದ ಮೂಲಕ ವ್ಯಾಕರಣಾತ್ಮಕ ನಿಯಮ ಮತ್ತು ರಚನೆಗಳನ್ನು ಪರಿಚಯಿಸಿದರೆ ವಿದ್ಯಾರ್ಥಿಗಳು ಮಾತನಾಡುವಾಗ ಅಥವಾ ಬರೆಯುವಾಗ ರಚನೆಗಳನ್ನು ಪರಿಣಾಮಕಾರಿಯಾಗಿ ಬಳಸುತ್ತಾರೆ. ಈ ವಿಧಾನವು

(1) ಇಂಡಕ್ಟಿವ್

(2) ಡಿಡಕ್ಟಿವ್

(3) ರಿಡಕ್ಟಿವ್

(4) ಕನ್‌ಸ್ಟ್ರಕ್ಟಿವ್

113. ಉಪಾಧ್ಯಾಯರು ವಿದ್ಯಾರ್ಥಿಗಳಲ್ಲಿನ ಬರವಣಿಗೆಯ ದೋಷ ತಿದ್ದುವಿಕೆಗೆ ಬಹಳ ಪರಿಣಾಮಕಾರಿಯಾದ ಮಾರ್ಗವೆಂದರೆ

(1) ಬೋರ್ಡಿನ ಮೇಲೆ ಸರಿಯಾದ ಉತ್ತರವನ್ನು ಬರೆಯುವುದು

(2) ತಪ್ಪು ಉತ್ತರವನ್ನು ತಿದ್ದುವುದು

(3) ವಿದ್ಯಾರ್ಥಿಗಳು ಸಂಕೇತಗಳ ಮೂಲಕ ಸ್ವಯಂ ಪ್ರಮುಖ ತಪ್ಪುಗಳನ್ನು ಕಂಡುಹಿಡಿದು ಸರಿಪಡಿಸುವುದು

(4) ಸರಿಯಾದ ಪ್ರತ್ಯುತ್ತರವನ್ನು ಕಲಿಯುವವರಿಗೆ ಅಭ್ಯಾಸ ಮಾಡಿಸುವುದು

114. ಬಹಳಷ್ಟು ಬಾರಿ ವಿದ್ಯಾರ್ಥಿಗಳು L3 ಭಾಷೆಗೆ L1 ಮತ್ತು L2 ಭಾಷೆಗಳಿಗೆ ಕೊಡುವಷ್ಟು ಪ್ರಮಾಣದ ಮಹತ್ವವನ್ನು ಕೊಡುವುದಿಲ್ಲ. ಅವರನ್ನು L3 ಕಲಿಕೆಗೆ ....................

(1) ಹೆಚ್ಚು ಬೋಧನಾವಧಿಗಳನ್ನು ತೆಗೆದುಕೊಳ್ಳುವಂತೆ ಹೇಳಬೇಕು.

(2) ಆಸಕ್ತಿಯುತವಾದ ಅಭ್ಯಾಸಗಳೊಂದಿಗೆ ಪ್ರೇರೇಪಿಸಬೇಕು.

(3) ಬೇರೆ L3 ತೆಗೆದುಕೊಳ್ಳುವಂತೆ ಹೇಳಬೇಕು.

(4) L3 ಭಾಷೆಗೆ ತೀರಾ ಸರಳ ಪಠ್ಯಗಳನ್ನು ಕೊಡಬೇಕು.

115. ವಿದ್ಯಾರ್ಥಿಗಳಿಗೆ ಅವರ ಓದುವಿಕೆಯಲ್ಲಿ ಅವರಿಗೆ ಗೊತ್ತಿಲ್ಲದ ಪದಗಳು ಬಂದಾಗ ಆ ಸಂದರ್ಭವನ್ನು ನಿರ್ವಹಿಸಲು ಈ ಬಗೆಯ ವಿಧಾನವನ್ನು ಹೇಳಿಕೊಡಬೇಕು

(1) ನಿಘಂಟೊಂದನ್ನು ಬಳಸಿ ತಕ್ಷಣವೇ ಅರ್ಥವನ್ನು ತಿಳಿಯುವುದು.

(2) ಬೋಧಕರನ್ನೋ ನೆರೆಹೊರೆಯವರನ್ನೋ ಕೇಳುವುದು.

(3) ಆ ಪಠ್ಯದಲ್ಲೇ ದೊರಕುವ ಸಂದರ್ಭದಿಂದ ಸಾಧ್ಯವಾದಷ್ಟೂ ಆ ಪದದ ಅರ್ಥವನ್ನು ಸರಿಯಾಗಿ ಊಹಿಸುವ ವಿಧಾನವನ್ನು ಹೇಳಿಕೊಡುವುದು.

(4) ಸರಳವಾದ ಪಠ್ಯಗಳನ್ನು ಕೊಡುವುದು.

116. ಯಾವುದು ವಿದ್ಯಾರ್ಥಿಗಳ ಹೆಚ್ಚಿನ ಓದು-ಗ್ರಹಿಕೆಯನ್ನು ಸೂಚಿಸುತ್ತದೆ?

(1) ಮುಖ್ಯ ಅಂಶಗಳನ್ನು ಬರೆಯುವುದು, ಪಠ್ಯವೊಂದರ ಮುಖ್ಯ ಪದಗಳನ್ನು ಬಳಸುವುದು, ಪಠ್ಯದೊಳಗಿನ ಅರ್ಥ ಸ್ವರೂಪವನ್ನು ಗುರುತಿಸುವುದು.

(2) ವಿದ್ಯಾರ್ಥಿ ತನ್ನ ಸ್ವಂತ ಪದಗಳನ್ನು ಮತ್ತು ಪಠ್ಯದಲ್ಲಿ ಬಳಕೆಯಾದ ಕೆಲ ಮುಖ್ಯ ಪದಗಳನ್ನು ಬಳಸಿ ಬರೆಯುವುದು.

(3) ವಿದ್ಯಾರ್ಥಿ ತನ್ನ ಸ್ವಂತ ಪದಗಳನ್ನು ಬಳಸಿ, ಪಠ್ಯದಿಂದ ಕೆಲ ಅಪೂರ್ಣ ವಾಕ್ಯಗಳನ್ನು ಬಳಸಿ ಅರ್ಥ ಬರೆಯುವುದು.

(4) ವಿದ್ಯಾರ್ಥಿಯು ಸ್ವಂತ ಪದಗಳನ್ನು ಬಳಸಿ, ಸ್ವಂತದ ಪೂರ್ಣ ವಾಕ್ಯಗಳನ್ನು ಬಳಸಿ ಪಠ್ಯದ ವಿವಿಧ ಅರ್ಥ ಸಾಧ್ಯತೆಗಳನ್ನು ಅರಿತು ಬರೆಯುವುದು.

117. ಯಾವುದೇ ಒಂದು ಬರಹದ ಮೌಲ್ಯಮಾಪನ ಮಾಡುವಾಗ ಗಮನಿಸಬೇಕಾದ ಮೊದಲ ಅಂಶ

(1) ಪದಕೋಶದ ಇತಿಮಿತಿಗಳು.

(2) ಬರಹದ ವಸ್ತು, ವಿಷಯ, ತಾತ್ಪರ್ಯ ಮತ್ತು ಅದು ಹೇಳುವ ವಿಚಾರಗಳು.

(3) ಪದ ಸಂಪತ್ತು.

(4) ವ್ಯಾಕರಣ ರಚನೆಗಳು.

118. ಭಾಷಾ ಕಲಿಕೆಯಲ್ಲಿ ............ ಬೋಧನಾ ಕ್ರಮ ಹೆಚ್ಚಿನ ಸ್ವತಂತ್ರ ಓದು, ಬಹುಮುಖೀ ಪಠ್ಯಗಳು ಮತ್ತು ತಕ್ಷಣದ ಮೌಲ್ಯಮಾಪನಗಳನ್ನು ನೀಡುತ್ತದೆ.

(1) ಪರೋಕ್ಷ

(2) ಕಂಪ್ಯೂಟರ್ ಸಹಾಯಿತ

(3) ನೇರ

(4) ದೂರ

119. ಭಾಷಾ ಕಲಿಕಾ ತರಗತಿಯಲ್ಲಿ ಕಲಿಯಬೇಕಾದ ಭಾಷೆಯ ಮಾತೃಭಾಷಿಕರು ಮತ್ತು ಅನ್ಯಭಾಷಿಕರು, ಎರಡೂ ವರ್ಗಗಳು ಒಂದೇ ಭಾಷೆಯನ್ನು ಕಲಿಯುತ್ತಿದ್ದಾರೆ. ಇದು ಕಲಿಯಬೇಕಾದ ಭಾಷೆಯ ಮಾತೃಭಾಷಿಕರಿಗೆ

(1) ಇನ್ನೊಂದು ಭಾಷೆಯನ್ನು ತಮಗೆ ತಾವೇ ಅರಿಯುವ ಅವಕಾಶವನ್ನು ಕೊಡುತ್ತದೆ.

(2) ಇನ್ನೊಂದು ತೊಂದರೆಗೆ ದಾರಿ ಮಾಡಿಕೊಡುತ್ತದೆ.

(3) ಕಲಿಕೆಯಲ್ಲಿ ಅಡೆತಡೆಯನ್ನೊಡ್ಡುತ್ತದೆ.

(4) ಅನ್ಯಭಾಷಿಕರಷ್ಟೇ ತಮ್ಮ ಭಾಷೆಯನ್ನು ಕಲಿಯುವ ಹಾಗೆ ಮಾಡುತ್ತದೆ.

120. ವಿದ್ಯಾರ್ಥಿಯೊಬ್ಬ ತಾನು ಕಲಿತದ್ದನ್ನು ಅನ್ವಯಿಸುವುದರಲ್ಲಿ ಸಮರ್ಥನಿಲ್ಲ, ಉದಾಹರಣೆಗೆ ವಾಕ್ಯವೊಂದನ್ನು ಸಮೀಕರಣಕ್ಕೆ ಬದಲಾಯಿಸುವುದನ್ನು ಇತ್ಯಾದಿ. ಅಂತಹ ಸಂದರ್ಭದಲ್ಲಿ

(1) ಆ ಕೆಲಸಗಳಲ್ಲಿ ಚುರುಕಿರುವವರನ್ನು ಜೊತೆಯಲ್ಲಿ ಬಿಡಬೇಕು.

(2) ಆ ವಿದ್ಯಾರ್ಥಿಗೆ ಸರಳ-ಸರಳ-ಸಂಕೀರ್ಣ ಚಟುವಟಿಕೆಗಳನ್ನು ಜಾಗರೂಕತೆಯಿಂದ ಹಂತ-ಹಂತವಾಗಿ ಕೊಡಬೇಕು.

(3) ಅವರಿಗೆ ಕೊಟ್ಟ ಅವೇ ಚಟುವಟಿಕೆಯನ್ನು ಮುಗಿಸಲು ಹೆಚ್ಚು ಸಮಯ ಕೊಡಬೇಕು.

(4) ಸರಳ ಚಟುವಟಿಕೆಯನ್ನು ಅವನ ಸಾಮರ್ಥ್ಯಕ್ಕೆ ತಕ್ಕಹಾಗೆ ಕೊಡಬೇಕು.

ಅಭ್ಯರ್ಥಿಗಳು ಕನ್ನಡವನ್ನು ಭಾಷೆ—**II** ನ್ನಾಗಿ ಆಯ್ಕೆ ಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

## ಭಾಗ—V : ಭಾಷೆ—II

## ಕನ್ನಡ

*ಸೂಚನೆ:* ಕೆಳಗೆ ಕೊಟ್ಟಿರುವ ಗದ್ಯವನ್ನು ಓದಿ ಕೇಳಿರುವ ಪ್ರಶ್ನೆಗಳಿಗೆ **(121 ರಿಂದ 129)** ಸೂಕ್ತವಾದ ಆಯ್ಕೆಯನ್ನು ಆರಿಸಿ ಉತ್ತರಿಸಿ:

1969ರಲ್ಲಿ ಆರಂಭವಾದ 'ಪಂಚಾಕ್ಷರಿ' ಮಾಸಪತ್ರಿಕೆ 1988ರಲ್ಲಿ 'ಪಂಚಾಕ್ಷರವಾಣಿ'ಯಾಗಿ ಪರಿವರ್ತನೆಗೊಂಡಿತು. ಅವರ ಪಂಚಾಕ್ಷರಿ ಮುದ್ರಣಾಲಯದಿಂದ ಪ್ರಕಟವಾದ ಸಾಹಿತ್ಯ, ಕನ್ನಡ ಸಾಹಿತ್ಯ ಹಾಗೂ ಧಾರ್ಮಿಕ ರಂಗಕ್ಕೆ ಮಹತ್ವದ ಕೊಡುಗೆಯಾಗಿದೆ. ಪುಟ್ಟರಾಜಗವಾಯಿ ಅವರೇ ಈ ಸಾಧನೆಯ ಹಿಂದಿನ ಶಕ್ತಿ.

ಸಂಗೀತ, ಕಲೆ ಅಭ್ಯಸಿಸುವ ಆಶ್ರಮದ ವಿದ್ಯಾರ್ಥಿಗಳ ಪೋಷಣೆಯ ಸಲುವಾಗಿ 'ಶ್ರೀ ಕುಮಾರೇಶ್ವರ ನಾಟ್ಯ ಸಂಘ' ಸ್ಥಾಪಿಸಿದರು. ನಾಡಿನಾದ್ಯಂತ ನಾಟಕಗಳನ್ನು ಆಡಿದರು. 'ಹೇಮರೆಡ್ಡಿ ಮಲ್ಲಮ್ಮ', 'ನೆಲ್ಲೂರ ನಂಬೆಕ್ಕ' ಇವರ ಪ್ರಸಿದ್ಧ ನಾಟಕಗಳು. ಅದರ ವರಮಾನದಿಂದ ಮೂವತ್ತಾರು ಎಕರೆ ಜಮೀನು ಖರೀದಿಸಿ ವೀರೇಶ್ವರ ಪುಣ್ಯಾಶ್ರಮಕ್ಕೆ ನಿರಂತರ ವಾರ್ಷಿಕ ಆದಾಯ ಬರುವಂತೆ ವ್ಯವಸ್ಥೆ ಮಾಡಿದರು. ಸಂಚಾರಿ ಶಾಲೆಗೆ ಗದಗಿನಲ್ಲಿ ನೆಲೆ ಕಲ್ಪಿಸಿ ಆಶ್ರಮ ಕಟ್ಟಿಸಿದರು. ಅದು ಇಂದು ಹೆಮ್ಮರವಾಗಿ ಬೆಳೆದಿದೆ. ಬಡವ-ಬಲ್ಲಿದ, ಮೇಲು-ಕೀಳು ಎಂಬ ಭೇದಭಾವ ಮಾಡದೆ ಸಮಾನತೆಯಿಂದ ಅಂಧರು, ಅನಾಥರು ಅಂಗವಿಕಲ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದಾರೆ. ಗುರುಕುಲ ಪದ್ಧತಿಯನ್ನು ಮುಂದುವರೆಸಿದ್ದಾರೆ. ಪುಣ್ಯಾಶ್ರಮ ಕಲಾದೇಗುಲದ ನಂದಾದೀವಿಗೆಯಿಂದ ನಾಡಿನಾದ್ಯಂತ ಸಾವಿರಾರು ಪ್ರಣತಿಗಳು ಬೆಳಗಿವೆ; ಬೆಳಕು ಬೀರುತ್ತಿವೆ. ಇಂದಿನವರೆಗೆ ಸುಮಾರು ಹದಿನೈದು ಸಾವಿರಕ್ಕೂ ಮಿಕ್ಕಿ ಶಿಷ್ಯರಿದ್ದಾರೆ ಎಂಬುದೇ ಅದರಶ್ರೇಷ್ಠತೆಗೆ ಹಿಡಿದ ಕೈಗನ್ನಡಿ.

ಸಂಗೀತ ಕ್ಷೇತ್ರದಲ್ಲಿ ಬಸವರಾಜ ರಾಜಗುರು, ಅರ್ಜುನಸಾ ನಾಕೋಡ್, ಸಿದ್ದರಾಮ ಜಂಬಲದಿನ್ನಿ, ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ ಸೋಮನಾಥಮರುಡೂರು, ವೆಂಕಟೇಶ ಮೊದಲಾದವರು ಉಲ್ಲೇಖಾರ್ಹರು. ವಾದ್ಯಕಲಾವೃಂದದಲ್ಲಿ ಶೇಷಾದ್ರಿಗವಾಯಿ, ಮರೋಳವೀರಯ್ಯ, ಹನುಮಂತಾಚಾರ್ಯ, ವೀರೇಶಮದರಿ, ರೇವಣಪ್ಪಕುಂಕುಮಗಾರ, ಶಿವಪ್ಪಕುಕನೂರು, ವೀರನಗೌಡಕಂಪ್ಲಿ ಮುಂತಾದವರು ಪ್ರಮುಖರು. ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಈ ಆಶ್ರಮದ ಕಲಾವಿದರದೇ ಮೇಲುಗೈ. ಅವರಲ್ಲಿ ಟಿ.ಎಂ. ಚಂದ್ರಶೇಖರಶಾಸ್ತ್ರೀ, ವೀರೇಶಕಿತ್ತೂರು, ಕುಮಾರಿ ಸತ್ಯಭಾಮಹಳ್ಳಿಕೇರಿ ಪ್ರಖ್ಯಾತರು.

ಪುಟ್ಟರಾಜಗವಾಯಿಯವರು ನಾಡಿನಾದ್ಯಂತ ಸಂಚರಿಸಿ ಕೀರ್ತನೆ ಹಾಡಿ, ಪುರಾಣ ಪ್ರವಚನ ಮಾಡಿ ಜನಮನವನ್ನು ರಂಜಿಸಿ, ತಿದ್ದಿದ್ದಾರೆ. ಹಗ್ಗಲಿರುಳೂ ಸಂಗೀತಸೇವೆ ಜೊತೆಗೆ ಸಾಮಾಜಿಕ ಸೇವೆಯನ್ನೂ ಮಾಡಿದ್ದಾರೆ. ಇಷ್ಟಾದರೂ ಹಮ್ಮುಬಿಮ್ಮುಗಳಿಗೆ ಒಳಗಾಗದ ಸ್ಥಿತಪ್ರಜ್ಞರು. ಪಂಡಿತ ಪುಟ್ಟರಾಜ ಗವಾಯಿಗಳ ಪಾಂಡಿತ್ಯ ಮತ್ತು ಸಮಾಜಸೇವೆಗೆ ಹಲವಾರು ಪ್ರಶಸ್ತಿಗಳು ಸಂದಿವೆ. ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಹಾಗೂ ಸಂಗೀತ ಕ್ಷೇತ್ರಕ್ಕೆ ಮೀಸಲಾದ ಕನಕ-ಪುರಂದರ ಪ್ರಶಸ್ತಿ ದೊರಕಿವೆ. ರಾಷ್ಟ್ರಪತಿ ಬಾಬು ರಾಜೇಂದ್ರಪ್ರಸಾದ ರಾಷ್ಟ್ರೀಯ ಸನ್ಮಾನ ಲಭಿಸಿದೆ.

ಗಾನರತ್ನ, ಗಾನಕಲಾಗಂಧರ್ವ, ಉಭಯಗಾನಾಚಾರ್ಯ, ಸಂಗೀತರತ್ನ, ಕಲಾಭೂಷಣ, ಸಂಗೀತಪ್ರವೀಣ ಮೊದಲಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. 'ಜ್ಞಾನದೇಗುಲ' ಕರ್ನಾಟಕ ಜನತೆ ಇವರಿಗೆ ಅರ್ಪಿಸಿದ ಅಭಿನಂದನಾ ಗ್ರಂಥ. ಹಾವೇರಿ

ಜಿಲ್ಲೆಯ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೆ ಪಾತ್ರರಾಗಿದ್ದಾರೆ.

ಕಣ್ಣುಳ್ಳವರಿಗಿಂತ ಮಿಗಿಲಾಗಿ ನಾಡಸೇವೆಯನ್ನು ಗೈದಿದ್ದಾರೆ. ವೀರೇಶ್ವರ ಪುಣ್ಯಾಶ್ರಮವನ್ನು ಒಂದು ವಿಶ್ವವಿದ್ಯಾಲಯವಾಗಿ ರೂಪುಗೊಳಿಸಬೇಕೆಂಬುದು ಗವಾಯಿಗಳ ಮಹದಾಸೆ. ಇವರ ಜೀವನವೇ ಕಲಾತಪಸ್ಸು, ಸಾಧನೆ, ಪ್ರೇರಣೆ, ಮಾರ್ಗದರ್ಶನ, ಮಾನವತೆಯ ಚಿಂತನೆಗೆ ಆಕರ.

**121.** ಪುಟ್ಟರಾಜ ಗವಾಯಿಯವರಿಗೆ ಅರ್ಪಿಸಿದ ಅಭಿನಂದನಾ ಗ್ರಂಥ

(1) ಜ್ಞಾನಗಂಗಾ

(2) ಜ್ಞಾನ ಪ್ರವೀಣ

(3) ಜ್ಞಾನಭಾರತಿ

(4) ಜ್ಞಾನದೇಗುಲ

**122.** ಇವರು ವಾದ್ಯಕಲಾ ವೃಂದದಲ್ಲಿ ಒಬ್ಬರು

(1) ಅರ್ಜುನಸಾ

(2) ಮರೋಳವೀರಯ್ಯ

(3) ನಾಕೋಡ್

(4) ಬಸರರಾಜಗುರು

**123.** 'ಪಂಚಾಕ್ಷರಿ' ಎಂಬುದು

(1) ದಿನಪತ್ರಿಕೆ

(2) ವಾರಪತ್ರಿಕೆ

(3) ಮಾಸಪತ್ರಿಕೆ

(4) ವಾಣಿಜ್ಯಪತ್ರಿಕೆ

**124.** ಪುಟ್ಟರಾಜಗವಾಯಿ ಈ ಕೆಳಗಿನ ಯಾವ ಪ್ರಶಸ್ತಿಗೆ ಭಾಜನರಾಗಿರಲಿಲ್ಲ

(1) ಉಭಯಗಾನಾಚಾರ್ಯ

(2) ಗಾನಕಲಾ ಗಂಧರ್ವ

(3) ಗಾನ ರತ್ನ

(4) ರಾಜ ಸಾಮ್ರಾಟ

**125.** ಇವರಲ್ಲಿ ಯಾರು ಆಶ್ರಮ ಕಲಾವಿದರಲ್ಲ

(1) ಟಿ.ಎಂ. ಚಂದ್ರಶೇಖರ ಶಾಸ್ತ್ರಿ

(2) ವಿರೇಶ ಮದರಿ

(3) ವಿರೇಶ ಕಿತ್ತೂರು

(4) ಕುಮಾರಿ ಸತ್ಯಭಾಮ ಹಳ್ಳಿಕೇರಿ

**126.** ಪುಟ್ಟರಾಜ ಗವಾಯಿಯವರಿಗೆ ಈ ಕೆಳಕಂಡ ಯಾವ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿದೆ?

(1) ಮಂಗಳೂರು

(2) ಗುಲ್ಬರ್ಗ

(3) ಮೈಸೂರು

(4) ಕರ್ನಾಟಕ

127. ಇವರಲ್ಲಿ ಯಾರು ಸಂಗೀತ ಕ್ಷೇತ್ರದಲ್ಲಿ ಕೆಲಸ ಮಾಡಿದವರು?

(1) ವೆಂಕಟೇಶ

(2) ಸಿದ್ಧರಾಮ ಜಂಬಲದಿನ್ನಿ

(3) ಸೋಮನಾಥ ಮರುಡೂರು

(4) ಎಲ್ಲರೂ

128. ಪುಟ್ಟರಾಜ ಗವಾಯಿಗಳು .......... ಅನ್ನು ವಿಶ್ವವಿದ್ಯಾ ನಿಲಯವನ್ನಾಗಿ ರೂಪುಗೊಳಿಸಬೇಕೆಂದಿದ್ದರು.

(1) ಕುಮಾರೇಶ್ವರ ನಾಟ್ಯ ಸಂಘ

(2) ವೀರೇಶ್ವರ ಪುಣ್ಯಾಶ್ರಮ

(3) ಸಂದಗಿವಾಡ ಮಠ

(4) ಪಂಚಾಕ್ಷರಿ ವಾಣಿ

129. 'ನೆಲ್ಲೂರ ನಂಬೆಕ್ಕ' ಎಂಬುದು

(1) ನಾಟ್ಯ

(2) ಕವಿತೆ

(3) ನಾಟಕ

(4) ಸಂಗೀತ

*ಸೂಚನೆ:* ಕೆಳಗೆ ಕೊಟ್ಟಿರುವ ಗದ್ಯವನ್ನು ಓದಿ ಕೇಳಿರುವ ಪ್ರಶ್ನೆಗಳಿಗೆ **(130 ರಿಂದ 135)** ಸೂಕ್ತವಾದ ಆಯ್ಕೆಯನ್ನು ಆರಿಸಿ ಉತ್ತರಿಸಿ:

ಮುಸಲ್ಮಾನವೀರನ ಈ ಮಾತುಗಳನ್ನು ಕೇಳಿ ಎಚ್ಚಮನಾಯಕ ಏನೂ ಉತ್ತರ ಕೊಡದೆ ಮಲ್ಲಯುದ್ಧಕ್ಕೆ ಸಿದ್ಧನಾಗಿ ನಿಂತ. ಇದನ್ನು ನೋಡಿ ಮುಸಲ್ಮಾನವೀರನಿಗೆ ಪರಮಾನಂದವಾಯಿತು. ವೀರರು ಯುದ್ಧೋತ್ಸಾಹಿಗಳಾಗಿರುತ್ತಾರೆಂಬ ಮಾತು ಸುಳ್ಳಲ್ಲ. ಇಬ್ಬರೂ ಕೈಗೆ ಕೈಕೊಟ್ಟು ಕಾದಹತ್ತಿದರು. ಮುಸಲ್ಮಾನ ವೀರ ದೇಹದಾರ್ಢ್ಯದಿಂದ ಎಚ್ಚಮನಾಯಕನನ್ನು ಮೀರಿದ್ದನಲ್ಲದೆ, ವಯಸ್ಸಿನಿಂದಲೂ ಹಿರಿಯನಾಗಿದ್ದ. ಆತನ ಮೈಬಣ್ಣ ಕೆಂಪು, ನಿಲುವಿಕೆ ಎತ್ತರ, ಮೂಗು ಸರಳ, ನೇತ್ರಗಳು ತೇಜಃಪುಂಜವಾದವು. ವಿಶಾಲ ವಕ್ಷಸ್ಥಲದಿಂದಲೂ ಪುಷ್ಟ ತೋಳುಗಳಿಂದಲೂ ಆತ ಭವ್ಯನಾಗಿ ತೋರುತ್ತಿದ್ದ. ಆ ಇಬ್ಬರು ಚೆಲುವರಾದ ತರುಣರ ಮಲ್ಲಯುದ್ಧ ನೋಡತಕ್ಕದ್ದಾಗಿತ್ತು; ಆದರೆ ನಿರ್ಮಾನುಷವಾದ ಈ ರಣಭೂಮಿಯಲ್ಲಿ ಬೆಳಗು ಮುಂಜಾನೆ ಯಾರ ನೇತ್ರಗಳು ಅದನ್ನು ನೋಡಿ ಸಫಲವಾಗಬೇಕು? ಆ ಇಬ್ಬರು ತರುಣರು ಕಾದುತ್ತ ಆವೇಶಗೊಂಡರು. ಒಬ್ಬರ ಮೇಲೊಬ್ಬರು ಏರಿಹೋಗಿ ಒಬ್ಬರನ್ನೊಬ್ಬರು ನೆಲಕ್ಕೆ ಕೆಡವಹತ್ತಿದರು. ಮುಸಲ್ಮಾನವೀರನ ಅಸದೃಶ ಸಾಮರ್ಥ್ಯಕ್ಕೂ ಅಚುಂಬಿತ ಚಾಪಲ್ಯಕ್ಕೂ ನಾಯಕ ಮೆಚ್ಚಿ - "ಶಾಬಾಸ, ಯವನವೀರಾ, ಶಾಬಾಸ!" ಎಂದು ಆಗಾಗ್ಗೆ ಹೊಗಳುತ್ತಿದ್ದ. ತನಗಿಂತ ಚಿಕ್ಕವನಾದ ನಾಯಕ ತನ್ನೊಡನೆ ಸಮಾನ ಬಲದಿಂದ ಕಾದುವುದನ್ನು ನೋಡಿ ಯವನವೀರ ಬೆರಗಾಗಿದ್ದ. ಆತ ನಾಯಕನಂತೆ ಬಾಯಿಬಿಟ್ಟು ಹೊಗಳದಿದ್ದರೂ ಮನಸ್ಸಿನಲ್ಲಿ ನಾಯಕನ ಸತ್ತ್ವಾತಿಶಯಕ್ಕೂ ಹಿಡಿತಗಳಿಗೂ ಮೆಚ್ಚಿದ್ದ. ಅವರಿಬ್ಬರು ಈರ್ಷ್ಯೆಯಿಂದ ಕಾದುತ್ತಿರಲು, ಏನಾಯಿತೋ ಅವರದು ಅವರಿಗೇ ಗೊತ್ತು. ಕ್ಷಣದಲ್ಲಿ ಎಚ್ಚಮನಾಯಕ ಮುಸಲ್ಮಾನವೀರನನ್ನು ಅಂಗಾತ ಕೆಡವಿ, ಅವನ ಎದೆಯ ಮೇಲೆ ಕುಳಿತು, ಕೂಡಲೆ ಎದ್ದು ವಿನಯದಿಂದ ಸಲಾಮು ಮಾಡಿ ಹಿಂದಕ್ಕೆ ಸರಿದುಕೊಂಡ. ಮುಸಲ್ಮಾನವೀರನು

ನಾಯಕನ ಈ ಸತ್ತ್ವಾತಿಶಯವನ್ನೂ ಸೌಜನ್ಯವನ್ನೂ ವಿನಯವನ್ನೂ ನೋಡಿ ಬೆರಗಾಗಿ ವಿನಯದಿಂದ ಆತನಿಗೆ ಸಲಾಮು ಮಾಡಿ ಪ್ರೀತಿಯಿಂದ ಕೈಹಿಡಿದು ನುಡಿದನೇನೆಂದರೆ - ವೀರನಾದ ಮಿತ್ರನೇ, ನೀನು ಧನ್ಯನು! ನಿಮ್ಮಂತಹ ಕನ್ನಡ ವೀರರು ವಿಜಯನಗರದ ರಾಜ್ಯದಲ್ಲಿ ಇನ್ನೂ ಮೂಡುತ್ತಿರುವುದರಿಂದ ಆ ರಾಜ್ಯದ ಬೇರುಗಳನ್ನು ಕಿತ್ತು ಒಗೆಯಲಿಕ್ಕೆ ನಮ್ಮ ಬಾದಶಹರು 50 ವರ್ಷ ಯತ್ನಿಸಿದರೂ ಆ ಕಾರ್ಯ ದುಸ್ಸಾಧ್ಯವಾಗಿದೆ. ನಿಮ್ಮಂತಹ ಸಹಸ್ರಾವಧಿ ಸತ್ತ್ವಶಾಲಿಗಳು ಭುಜಕ್ಕೆ ಭುಜ ಆನಿಸಿ ಸಾಲುಗೊಂಡು ರಣಭೂಮಿಯಲ್ಲಿ ನಿಲ್ಲುತ್ತಿರುವಾಗ ವಿಜಯನಗರದ ಯಶೋದುಂದುಭಿಯ ಗಂಭೀರ ಧ್ವನಿ ದಿಕ್ಕುದಿಕ್ಕುಗಳಲ್ಲಿ ಹಬ್ಬಿದ್ದು ಆಶ್ಚರ್ಯವೇನು! ನೀನು ಜಯಶಾಲಿಯಾಗಿದ್ದರೂ ನನ್ನೊಡನೆ ವಿನಯದಿಂದ ನಡೆದುಕೊಳ್ಳುವುದನ್ನು ನೆನೆಸಿಕೊಂಡರೆ, ಕನ್ನಡಿಗರ ಸಹೃದಯತೆ ಸಾಕಾರಗೊಂಡು ನನ್ನೆದುರಿಗೆ ನಿಂತಂತೆ ತೋರುತ್ತದೆ. ಶಾಬಾಸ, ಕನ್ನಡವೀರಾ! ಶಾಬಾಸ! ನಿನ್ನಂತಹ ಉದಾರಾಂತಃಕರಣದ ವೀರನಿಗೆ ಆಪತ್ಕಾಲದಲ್ಲಿ ಸಹಾಯ ಮಾಡುವುದು ನನ್ನ ಪವಿತ್ರ ಕರ್ತವ್ಯವಾಗಿರುವುದು, ನಿನ್ನಿಂದ ಎರಡುಸಾರಿ ಗೆಲ್ಲಲ್ಪಟ್ಟ ಈ ದೇಹ ನಿನ್ನದಾದ್ದರಿಂದ ನಿನ್ನ ಹಿತಚಿಂತನದಲ್ಲಿಯೇ ಅದು ಸವೆದು ಹಿಟ್ಟಾದೀತು. ಸಾಕು, ಇದಕ್ಕೂ ಹೆಚ್ಚಿಗೆ ಹರಟಿ ನಿನ್ನ ಅನಾದರಕ್ಕೆ ಪಾತ್ರನಾಗುವುದು ಸರಿಯಲ್ಲ, ನನ್ನ ಹೆಸರು ಚಾಂದ್ ಖಾನ್. ವಿಪತ್ತಿನಲ್ಲಿ ಎಚ್ಚಮನಾಯಕನಿಗೆ ಸಹಾಯ ಮಾಡದ ಹೊರತು ಚಾಂದ್‌ಖಾನನ ಜನ್ಮ ಸಫಲವಾಗದು. ಹೋಗಿ ಬರುತ್ತೇನೆ, ಅಪ್ಪಣೆ ಕೊಡು, ಎಂದು ಹೇಳಿ ಆ ಮುಸಲ್ಮಾನವೀರ, ನಾಯಕನಿಗೆ ವಿನಯದಿಂದ ಸಲಾಮು ಮಾಡಿ ಕುದುರೆ ಹತ್ತಿ ಬಂದ ದಾರಿಯಲ್ಲಿ ತಿರುಗಿ ಹೋದ...''

**130.** ಮುಸಲ್ಮಾನವೀರನ ನಿಜವಾದ ಹೆಸರು

(1) ಶಾಬಾಸ್ ಖಾನ್

(2) ಚಾಂದ್ ಖಾನ್

(3) ಚಂಗೇಶ್ ಖಾನ್

(4) ಲಾಲ್‌ಚಾಂದ್ ಖಾನ್

**131.** ಮೇಲಿನ ಗದ್ಯದಲ್ಲಿನ ವೀರರು ಯಾವ ಯುದ್ಧಕ್ಕೆ ಸಿದ್ಧರಾಗಿ ನಿಂತರು?

(1) ಮಲ್ಲಯುದ್ಧ

(2) ಕತ್ತಿವರಸೆ

(3) ಗದಾಯುದ್ಧ

(4) ಭಲ್ಲೆಯುದ್ಧ

**132.** ಈ ಗದ್ಯದಲ್ಲಿ ಬರುವ ಈರ್ಷ್ಯೆ ಪದದ ಅರ್ಥ

(1) ಇರಿ

(2) ಮತ್ಸರ

(3) ಕೇಡು

(4) ವಾದ

**133.** ಈ ಗದ್ಯದಲ್ಲಿ ಬರುವ ಯುವನವೀರ ಯಾರು?

(1) ಎಚ್ಚಮನಾಯಕ

(2) ಅಹ್ಮದ್‌ಖಾನ್

(3) ವೀರಸೇನ ನಾಯಕ

(4) ಚಾಂದ್ ಖಾನ್

**134.** ಇಲ್ಲಿನ ಇಬ್ಬರು ವೀರರಲ್ಲಿ ವಯಸ್ಸಿನಲ್ಲಿ ಹಿರಿಯ

(1) ಮುಸಲ್ಮಾನ ವೀರ

(2) ಎಚ್ಚಮನಾಯಕ

(3) ವಿಜಯನಗರ ವೀರ

(4) ತ್ರಿವಿಕ್ರಮ ವೀರ

**135.** ಚಾಂದ್ ಖಾನ್, ಎಚ್ಚಮನಾಯಕನಿಗೆ ಹೀಗೆ ಹೇಳುತ್ತಾನೆ

(1) ಶಾಬಾಸ, ಯವನವೀರಾ! ಶಾಬಾಸ!

(2) ಶಾಬಾಸ, ಕನ್ನಡಿಗಾ! ಶಾಬಾಸ!

(3) ಶಾಬಾಸ, ಕನ್ನಡ ವೀರಾ! ಶಾಬಾಸ!

(4) ಶಾಬಾಸ, ವಿಜಯನಗರ ವೀರಾ! ಶಾಬಾಸ!

ಸೂಚನೆ : ಕೆಳಗಿನ ಪ್ರಶ್ನೆಗಳಿಗೆ ಕೆಳಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದುದನ್ನು ಆರಿಸಿ ಉತ್ತರಿಸಿ **(136 ರಿಂದ 150)** :

**136.** 'ಕಲಿಯುವವರು ತಮ್ಮ ಜ್ಞಾನ ಸ್ವರೂಪವನ್ನು ರೂಪಿಸಿಕೊಳ್ಳುತ್ತಾರೆ'. ಈ ಹೇಳಿಕೆಯನ್ನು ಭಾಷಾ ತರಗತಿಯಲ್ಲಿ ಈ ಮೂಲಕ ಸಾಧಿಸಬಹುದು

(1) ಕಲಿಯುವವರನ್ನು ಕಲಿಯಬೇಕಾದ ಭಾಷೆಯ ಪಠ್ಯಗಳನ್ನು ಮತ್ತೆ ಮತ್ತೆ ಓದಲು ಪ್ರೋತ್ಸಾಹಿಸುವುದರ ಮೂಲಕ

(2) ಅವರವರ ಸಾಮರ್ಥ್ಯಕ್ಕೆ ಸರಿಯಾಗಿ ಪಠ್ಯಗಳನ್ನು ನಿರ್ದೇಶಿಸುವುದರ ಮೂಲಕ

(3) ಸ್ವತಂತ್ರವಾಗಿ ಮತ್ತು ಜೊತೆಗೂಡಿ ನಡೆಸುವ ಅಭ್ಯಾಸ ಚಟುವಟಿಕೆಗಳಿಗೆ ಅವಕಾಶ ನೀಡಿ ಅವರಿಗೆ ಪರಸ್ಪರ ವಿಚಾರ ವಿನಿಮಯ ಮತ್ತು ಮಾತುಕತೆಯತ್ತ ನಡವಳಿಕೆಗೆ ಪ್ರೋತ್ಸಾಹಿಸುವುದರ ಮೂಲಕ

(4) ಬೋಧಕ ಪ್ರತೀ ವಿದ್ಯಾರ್ಥಿಯ ಚಟುವಟಿಕೆಯನ್ನು ಪ್ರತ್ಯೇಕವಾಗಿ ಮೇಲ್ವಿಚಾರಣೆ ಮಾಡಿ ಮೇಲಿಂದ ಮೇಲೆ ಸಲಹೆಗಳನ್ನು ಕೊಡುವುದರ ಮೂಲಕ

**137.** ಬೋಧಕರು ಕಲಿಯಬೇಕಾದ ಭಾಷೆಯಲ್ಲಿ ತೃಪ್ತಿಕರವಾಗಿ ಮಾತಾಡಬಹುದಾದಂತಹ ವಾತಾವರಣವನ್ನು ತಮ್ಮ ವಿದ್ಯಾರ್ಥಿಗಳಿಗೆ ರೂಪಿಸಿಕೊಟ್ಟು ................

(1) ಅವರನ್ನು ತಮ್ಮಷ್ಟಕ್ಕೆ ತಾವು ಮಾತಾಡಿಕೊಳ್ಳಲು ಬಿಡಬೇಕು.

(2) ಅವರಿಗೆ ತರಗತಿಯಲ್ಲಿ ಬಳಸಬೇಕಾದ ವಾಕ್ಯಗಳ ಬಳಕೆಯನ್ನು ತಿಳಿಹೇಳಿ ಅದಕ್ಕೆ ಮಾದರಿಯನ್ನು ರೂಪಿಸಬೇಕು.

(3) ಅವರಿಗೆ ಮೇಲಿಂದ ಮೇಲೆ ಬರೆಯುವ ಮತ್ತು ಓದುವ ಚಟುವಟಿಕೆಗಳನ್ನು ನೀಡಬೇಕು.

(4) ದೃಶ್ಯ ಚಿತ್ರಗಳನ್ನು ಕೊಡಬೇಕು.

**138.** ಭಾಷೆಯೊಂದನ್ನು ಕಲಿಯುವಾಗ ನಾವು ಬಹು ಸಹಜವಾಗಿ

(1) ಹೇಳಬೇಕಾದ ಮಾತಿನ ರೂಪಕ್ಕಿಂತ ಮಾತಿನ ಅರ್ಥಕ್ಕೆ ಹೆಚ್ಚು ಗಮನ ಕೊಡುತ್ತೇವೆ.

(2) ನಮ್ಮ ಪೋಷಕರ ಮಾತನ್ನು ಕೇಳಿಸಿಕೊಳ್ಳುತ್ತೇವೆ.

(3) ನಮಗೆ ಗೊತ್ತಿರುವ ಪದಗಳನ್ನು ಬಳಸಿ ನಮಗೆ ನಾವೇ ಓದಿಕೊಳ್ಳುತ್ತೇವೆ.

(4) ಬಹು ಸುಂದರವಾಗಿ ಮಾತಾಡಲು ಪ್ರಯತ್ನಿಸುತ್ತೇವೆ.

**139.** ಭಾಷಾ ಕಲಿಕೆಯ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಧ್ವನಿ ಸುರುಳಿಯನ್ನು ಕೇಳಿ ಕೆಲವು ಟಿಪ್ಪಣಿಗಳನ್ನು ಮಾಡಿಕೊಳ್ಳಲು ಸೂಚಿಸಲಾಗಿದೆ. ಈ ಚಟುವಟಿಕೆಯನ್ನು .............. ಎನ್ನುತ್ತೇವೆ.

(1) ಮಾಹಿತಿ ವರ್ಗಾವಣೆ

(2) ಭವಿಷ್ಯ ಕಥನ

(3) ಸ್ಮರಿಸಿಕೊಳ್ಳುವಿಕೆ

(4) ಅರ್ಥೈಸುವಿಕೆ

**140.** ಈ ಬಗೆಯ ಪ್ರಶ್ನೆಗಳು ತರಗತಿಯಲ್ಲಿ ................ ಕೌಶಲ್ಯವನ್ನು ಅಭ್ಯಸಿಸಲು ಸೂಕ್ತ.
ವಿದ್ಯಾರ್ಥಿ ಮಾತುಕತೆಗಳು
- ನಿನ್ನ ತಂದೆ ಕೊಟ್ಟ ದುಡ್ಡಿನಲ್ಲಿ ನೀನು ಏನನ್ನು ಕೊಂಡುಕೊಂಡೆ?
- ನಿನ್ನ ಊರು ಏನಕ್ಕೆ ಪ್ರಸಿದ್ಧಿ?
- ಮನೆಯಲ್ಲಿ ನೀನು ಏನೇನು ಸಹಾಯ ಮಾಡಿದೆ?
- ನಿನ್ನ ಹವ್ಯಾಸಗಳನ್ನು ಕುರಿತು ಹೇಳು.

(1) ಮಾತಾಡುವುದು

(2) ಬರೆಯುವುದು

(3) ಶ್ರವಣ

(4) ಪದಕೋಶ ಅಭಿವೃದ್ಧಿ

141. ವಿದ್ಯಾರ್ಥಿಗಳು ವ್ಯಾಕರಣ ಮತ್ತು ಭಾಷಾರಚನೆಗಳನ್ನು ತಾಳೆಹಾಕಿ ಕಲಿತಾಗ ಅವರಿಗೆ

(1) ವ್ಯಾಕರಣವು ಮೂಲಭೂತ ಭಾಷಿಕ ಸಂವಹನಕ್ಕೆ ಎಷ್ಟು ಉಪಯುಕ್ತ ಎಂದು ತಿಳಿಯುತ್ತದೆ.

(2) ಹೇಗೆ ಬರಹದ ಶೈಲಿ ವ್ಯಾಕರಣದಿಂದ ಪ್ರಭಾವಿತ ಎಂಬುದು ಅರ್ಥವಾಗುತ್ತದೆ.

(3) ಭಾಷಿಕ ಸಂವಹನದಲ್ಲಿ ಅವೆರಡರ ಮಹತ್ವ ಮತ್ತು ಅವರ ಮಾತಾಡುವ ಸಾಮರ್ಥ್ಯವನ್ನು ಕಲಾತ್ಮಕವಾಗಿ ಹೆಚ್ಚಿಸಿಕೊಳ್ಳುವ ಅರಿವು ಮತ್ತು ತಿಳುವಳಿಕೆ ಬೆಳೆಯುತ್ತದೆ.

(4) ವ್ಯಾಕರಣಕ್ಕೆ ಹೆಚ್ಚು ಮಹತ್ವ ಕೊಡಬೇಕೆಂದು ಅರಿವಾಗುತ್ತದೆ.

142. ಉಕ್ತಲೇಖನ ಬರೆಯುವಿಕೆ ಭಾಷಾ ಕಲಿಕೆಯಲ್ಲಿ ಹೆಚ್ಚು ಕ್ಲಿಷ್ಟಕರವಾದ ಪ್ರಕ್ರಿಯೆ. ಆದ್ದರಿಂದ ಬೋಧಕರು

(1) ವ್ಯಾಕರಣಾತ್ಮಕ ರಚನೆಗಳ ಅಭ್ಯಾಸಕ್ಕೆ ಹೆಚ್ಚು ಒತ್ತು ಕೊಡಬೇಕು.

(2) ವಿದ್ಯಾರ್ಥಿಗಳಿಗೆ ಕಲಿಯಬೇಕಾದ ಭಾಷೆಯಲ್ಲಿ ಮಾತಾಡಲು ಹೆಚ್ಚಿನ ಆತ್ಮವಿಶ್ವಾಸ ತುಂಬಿ ವ್ಯಾಕರಣವನ್ನು ಕಮ್ಮಿ ಮಾಡಬೇಕು.

(3) ಸರಳವಾದ ಚಟುವಟಿಕೆಗಳನ್ನು ಕೊಟ್ಟು ವ್ಯಾಕರಣವನ್ನು ಕಮ್ಮಿ ಮಾಡಬೇಕು.

(4) ವಾಕ್ಯವನ್ನು ಅರ್ಥದ ದೃಷ್ಟಿಯಿಂದ ಸರಿಬರುವ ಹಾಗೆ ಮೂಲಭೂತ ಸಂವಹನಕ್ಕೆ ಒಗ್ಗುವ ಹಾಗೆ ಓದಿಕೊಳ್ಳಬೇಕು.

143. ವ್ಯಾಕರಣ ದೋಷಗಳ ತಿದ್ದುಪಡಿ ಅತೀ ಹೆಚ್ಚು ಬರುವುದು

(1) ವಿದ್ಯಾರ್ಥಿ ತನ್ನದೇ ಬರಹ ಇಲ್ಲವೇ ಮಾತುಗಳನ್ನು ಪರಿಷ್ಕರಿಸುವಾಗ

(2) ಬೋಧಕರು ಹೇಳಿದಾಗ

(3) ಬರೆಯುವ ಮುಂಚೆ ಅತೀ ಹೆಚ್ಚು ವ್ಯಾಕರಣದ ಅಭ್ಯಾಸಗಳನ್ನು ಕೊಟ್ಟಾಗ

(4) ಬೋಧಕರು ಮೇಲಿಂದ ಮೇಲೆ ವ್ಯಾಕರಣದ ತರಗತಿಗಳನ್ನು ತೆಗೆದುಕೊಂಡಾಗ

144. ಅನ್ಯಭಾಷಾ ಕಲಿಕೆಯ ಪ್ರಕ್ರಿಯೆಯಲ್ಲಿ ಉಚ್ಚಾರಣಾ ದೋಷಗಳು ಒಂದು ಬಗೆಯ ಓದುವಿಕೆಯಿಂದ ಹೆಚ್ಚಾಗುತ್ತದೆ. ಅದೆಂದರೆ

(1) ಗಟ್ಟಿಯಾಗಿ ಓದುವುದರಿಂದ

(2) ಮನಸ್ಸಿನಲ್ಲೇ ಓದುವುದರಿಂದ

(3) ಮುದ್ರಿಸಿದ ಹಾಗೇ ಓದುವುದರಿಂದ

(4) ಗಮನವಿಲ್ಲದೇ ಓದುವುದರಿಂದ

145. ಬೋಧಕ ಸಸ್ಯಗಳನ್ನು ಕುರಿತು ಪಾಠ ಮಾಡುತ್ತಿದ್ದಾರೆ. ಬೋಧಕರು ವಿದ್ಯಾರ್ಥಿಗಳ ಅನುಭವಕ್ಕೆ ನಿಲುಕುವ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳುತ್ತಾರೆ. ಆನಂತರ ವಿದ್ಯಾರ್ಥಿಗಳನ್ನು ಕೆಲ ಗುಂಪುಗಳಾಗಿ ವಿಂಗಡಿಸಿ ಹೂವಿನ ಗಿಡವೊಂದರ ಚಿತ್ರ ಬರೆದು ಅದಕ್ಕೆ ಸರಿಯಾಗಿ ವಿವಿಧ ಭಾಗಗಳ ಹೆಸರನ್ನು ಬರೆಯುವಂತೆ ಸೂಚಿಸುತ್ತಾರೆ. ಆನಂತರ ಪ್ರತೀ ಗುಂಪಿನ ಒಬ್ಬ ವಿದ್ಯಾರ್ಥಿ ಅವರು ಮಾಡಿದ ಕೆಲಸ ಕುರಿತು ಅವರು ಬರೆದ ಚಿತ್ರವನ್ನು ಕುರಿತು, ಭಾಗಗಳನ್ನು ಹೆಸರಿಸಿರುವ ವಿಧವನ್ನು ಕುರಿತು ಮಾತಾಡುತ್ತಾರೆ. ಈ ಮೂಲಕ ವಿದ್ಯಾರ್ಥಿಗಳು

(1) ಆ ಗಿಡವನ್ನು ಕುರಿತ ವಿಷಯಗಳನ್ನು ಮತ್ತು ಆಗಿದ್ದ ಚಿತ್ರ ಬರೆಯುವ ಮತ್ತು ಅದರ ಭಾಗಗಳನ್ನು ಹೆಸರಿಸುವ ಅರಿವನ್ನು ಪಡೆಯುತ್ತಿದ್ದಾರೆ

(2) ಮೇಲ್ಕಾಣಿಸಿದ ಪ್ರಕ್ರಿಯೆಗೆ ಸಂಬಂಧಿಸಿದ ಭಾಷಿಕ ರೂಪಗಳನ್ನು ಕಲಿಯುತ್ತಿದ್ದಾರೆ

(3) ಉತ್ತರ (1) ಮಾತ್ರ ಸರಿ

(4) ಉತ್ತರ (1) ಮತ್ತು (2), ಎರಡೂ ಸರಿ

**146.** ಕಾವ್ಯದ ಅಥವಾ ಪದ್ಯದ ಓದುವಿಕೆ ಗದ್ಯದ ಓದುವಿಕೆಗಿಂತ ಭಿನ್ನವಾಗಿದೆ. ಏಕೆಂದರೆ ವಿದ್ಯಾರ್ಥಿಗಳು ಕೆಳಕಂಡ ಹೆಚ್ಚುವರಿ ಅಂಶಗಳನ್ನು ಗ್ರಹಿಸಬೇಕು

(1) ಹೆಚ್ಚು ಪ್ರಜ್ಞಾಪೂರ್ವಕ ಅರ್ಥೈಸುವಿಕೆ

(2) ವೈಯಕ್ತಿಕ ಮಟ್ಟದ ಭಾವನಾತ್ಮಕ ಅರ್ಥೈಸುವಿಕೆ ಮತ್ತು ಪ್ರಕ್ರಿಯೆ

(3) ಪ್ರಜ್ಞಾತ್ಮಕ, ಭಾವನಾತ್ಮಕ ಅರ್ಥೈಸುವಿಕೆ ಮತ್ತು ಪ್ರತಿಕ್ರಿಯೆ ಮತ್ತು ಕೊಟ್ಟಿರುವ ಪದ್ಯವನ್ನು ಮೌಲ್ಯಮಾಪನ ಮಾಡುವ ದೃಷ್ಟಿಕೋನ

(4) ಶೈಲಿಯ ಅರಿವು

**147.** ಪ್ರಬಂಧಗಳ ಮೌಲ್ಯಮಾಪನ ಮಾಡುವಾಗ ಸಾರಾಂಶರೂಪದ, ಎಲ್ಲೂ ಪುನರಾವರ್ತನೆಗಳಿಲ್ಲದ ಮತ್ತು ಪ್ರಬಂಧದ ಎಲ್ಲಾ ಮುಖ್ಯ ಅಂಶಗಳನ್ನು ಒಳಗೊಂಡ ಭಾಗ ಸಿಗುವುದು ..........

(1) 'ಮುಕ್ತಾಯ'ದಲ್ಲಿ

(2) ಎರಡನೇ ಪ್ಯಾರಾದಲ್ಲಿ

(3) ಮಧ್ಯದಲ್ಲಿ

(4) 'ಪೀಠಿಕೆ'ಯಲ್ಲಿ

**148.** ತಂತ್ರಜ್ಞಾನ ಭಾಷಾಕಲಿಕೆಯ ಉಚ್ಚಾರಣಾ ಕಲಿಕೆಯ ಭಾಗಕ್ಕೆ ಹೆಚ್ಚು ಸಹಕಾರಿಯಾಗಬಲ್ಲದು. ಈ ಕೆಳಗಿನವುಗಳಲ್ಲಿ ಯಾವುದು ತಪ್ಪು ಉತ್ತರ?

(1) ಪವರ್‌ಪಾಯಿಂಟ್ ಬಳಸುವುದು.

(2) ಬೋರ್ಡ್ ಬಳಸುವುದು.

(3) ದೃಶ್ಯಮಾಧ್ಯಮ ಬಳಸುವುದು.

(4) ಇಂಟರ್‌ನೆಟ್‌ನಿಂದ ಪೊರ್‌ಕಾಸ್ಟ್ ಕೇಳುವುದು

**149.** ತಮ್ಮ ಮಾತೃಭಾಷೆಯನ್ನಷ್ಟೇ ಮಾತಾಡಲು ಬರುವಂತಹ ವಿದ್ಯಾರ್ಥಿಗಳಿಗೆ ತರಗತಿಯನ್ನು ತೆಗೆದುಕೊಳ್ಳುವಾಗ, ಅನ್ಯಭಾಷೆ ಇಲ್ಲವೇ ವಿದೇಶಿ ಭಾಷೆಯನ್ನು ಬೋಧಿಸಬೇಕಾದ ಬೋಧಕರಿಗೆ

(1) ಕಲಿಸಬೇಕಾದ ಭಾಷೆಯನ್ನು ಕಲಿಸಲಾಗುವುದಲ್ಲ ಎಂದು ತಿಳಿದಿರಬೇಕು.

(2) ತಮ್ಮ ಜೊತೆಗಿನ ಸಂಪರ್ಕ ಮತ್ತು ಸಂವಾದದಿಂದ ಅವರು ಪಠ್ಯದ ವಿಷಯವನ್ನಲ್ಲದೆ ಬೇರೆಯ ಭಾಷೆಯೊಂದನ್ನು ಕಲಿಯುತ್ತಿದ್ದಾರೆ ಎನ್ನುವುದರ ಅರಿವು ಇರಬೇಕು.

(3) ವಿದ್ಯಾರ್ಥಿಗಳಿಗೆ ಪ್ರತ್ಯೇಕ ತರಗತಿಗಳನ್ನು ಕೊಡಬೇಕು ಎನಿಸಬಹುದು.

(4) ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯಲ್ಲಿ ಮಾತನಾಡದಂತೆ ನಿರ್ಬಂಧಿಸಬೇಕು ಎನಿಸಬಹುದು.

**150.** ಬರೆಯುವಾಗ ಒಬ್ಬ ವಿದ್ಯಾರ್ಥಿಗೆ ಪದಗಳ ಅರಿವಿನ ಕೊರತೆಯಿಂದ ತನ್ನ ಅನಿಸಿಕೆಯನ್ನು ವಿಚಾರವನ್ನು ಬರೆಯಲು ಕಷ್ಟವಾಗುತ್ತಿದೆ. ಆಗ ಬೋಧಕರು ಕೊಡಬಹುದಾದ ಪರಿಹಾರ

(1) ವಿದ್ಯಾರ್ಥಿಗೆ ಹೆಚ್ಚು ಹೆಚ್ಚು ಕಥಾ ಪುಸ್ತಕಗಳನ್ನು ಓದಲು ಪ್ರೋತ್ಸಾಹಿಸಿ ವಿದ್ಯಾರ್ಥಿ ಕಲಿತ ಹೊಸ ಪದಗಳತ್ತ ಆಗಾಗ ಗಮನ ಕೊಡಬೇಕು.

(2) ವಿದ್ಯಾರ್ಥಿಯ ಸಾಮರ್ಥ್ಯಕ್ಕೆ ಸರಿಯಾಗಿ ವಸ್ತುವನ್ನು ಬದಲಾಯಿಸಬೇಕು.

(3) ವಿದ್ಯಾರ್ಥಿಗೆ ಪದಗಳ ಪಟ್ಟಿಯೊಂದನ್ನು ಕೊಡಬೇಕು.

(4) ವಿದ್ಯಾರ್ಥಿಗೆ ಪ್ರತ್ಯೇಕ ತರಗತಿಯನ್ನು ಪದಕೋಶ ವೃದ್ಧಿಗೆಂದು ಮೀಸಲಿಡಬೇಕು.

SPACE FOR ROUGH WORK

ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :

1. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ ಪುಟ-2ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್‌ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.

2. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯು ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.

3. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತುಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.

4. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆ ಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).

5. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯ ಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ, ಚೀಟಿಗಳು, ಪೇಜರ್, ಮೊಬೈಲ್ ಫೋನು, ಎಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.

6. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ಅನ್ನು ನಿರೀಕ್ಷಕರಿಗೆ ತೋರಿಸಬೇಕು.

7. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.

8. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರಿ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್‌ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

9. ಎಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (calculator) ಉಪಯೋಗ ನಿಷೇಧಿಸಲಾಗಿದೆ.

10. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ-ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ-ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.

11. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.

12. ಪರೀಕ್ಷೆ ಮುಗಿದ ನಂತರ ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.

**READ THE FOLLOWING INSTRUCTIONS CAREFULLY :**

1. Out of the four alternatives for each question, only one circle for the correct answer is to be darkened completely with Blue/Black Ballpoint Pen on **Side-2** of the OMR Answer Sheet. The answer once marked is not liable to be changed.
2. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
3. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
4. The candidates will write the correct Test Booklet Code and Number as given in the Test Booklet/Answer Sheet in the Attendance Sheet.
5. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the Examination Hall/Room.
6. Each candidate must show on demand his/her Admit Card to the Invigilator.
7. No candidate, without special permission of the Superintendent or Invigilator, should leave his/her seat.
8. The candidates should not leave the Examination Hall without handing over their Answer Sheet to the Invigilator on duty and sign the Attendance Sheet twice. Cases where a candidate has not signed the Attendance Sheet, a second time will be deemed not to have handed over the Answer Sheet and dealt with as an unfair means case.
9. Use of Electronic/Manual Calculator is prohibited.
10. The candidates are governed by all Rules and Regulations of the Board with regard to their conduct in the Examination Hall. All cases of unfair means will be dealt with as per Rules and Regulations of the Board.
11. No part of the Test Booklet and Answer Sheet shall be detached under any circumstances.
12. **On completion of the test, the candidate must hand over the Answer Sheet to the Invigilator in the Room/Hall. *The candidates are allowed to take away this Test Booklet with them.***

**निम्नलिखित निर्देशों को ध्यान से पढ़ें :**

1. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर-पत्र के **पृष्ठ-2** पर केवल एक वृत्त को ही पूरी तरह नीले/काले बॉलपॉइंट पेन से भरें। एक बार उत्तर अंकित करने के बाद उसे बदला नहीं जा सकता है।
2. परीक्षार्थी सुनिश्चित करें कि इस उत्तर-पत्र को मोड़ा न जाए एवं उस पर कोई अन्य निशान न लगाएँ। परीक्षार्थी अपना अनुक्रमांक उत्तर-पत्र में निर्धारित स्थान के अतिरिक्त अन्यत्र न लिखें।
3. परीक्षा पुस्तिका एवं उत्तर-पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर-पत्र के संकेत या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी।
4. परीक्षा पुस्तिका/उत्तर-पत्र में दिए गए परीक्षा पुस्तिका संकेत व संख्या को परीक्षार्थी सही तरीके से हाजिरी-पत्र में लिखें।
5. परीक्षार्थी द्वारा परीक्षा हॉल/कक्ष में प्रवेश-कार्ड के सिवाय किसी प्रकार की पाठ्य-सामग्री, मुद्रित या हस्तलिखित, कागज की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है।
6. पूछे जाने पर प्रत्येक परीक्षार्थी, निरीक्षक को अपना प्रवेश-कार्ड दिखाएँ।
7. अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें।
8. कार्यरत निरीक्षक को अपना उत्तर-पत्र दिए बिना एवं हाजिरी-पत्र पर दुबारा हस्ताक्षर किए बिना परीक्षार्थी परीक्षा हॉल नहीं छोड़ेंगे। यदि किसी परीक्षार्थी ने दूसरी बार हाजिरी-पत्र पर हस्ताक्षर नहीं किए, तो यह माना जाएगा कि उसने उत्तर-पत्र नहीं लौटाया है और यह अनुचित साधन का मामला माना जाएगा।
9. इलेक्ट्रॉनिक/हस्तचालित परिकलक का उपयोग वर्जित है।
10. परीक्षा हॉल में आचरण के लिए परीक्षार्थी बोर्ड के सभी नियमों एवं विनियमों द्वारा नियमित हैं। अनुचित साधनों के सभी मामलों का फैसला बोर्ड के नियमों एवं विनियमों के अनुसार होगा।
11. किसी हालत में परीक्षा पुस्तिका और उत्तर-पत्र का कोई भाग अलग न करें।
12. परीक्षा सम्पन्न होने पर, परीक्षार्थी कक्ष/हॉल छोड़ने से पूर्व उत्तर-पत्र निरीक्षक को अवश्य सौंप दें। *परीक्षार्थी अपने साथ इस परीक्षा पुस्तिका को ले जा सकते हैं।*